UNIVERSITY OF AGRICULTURAL SCIENCES, DHARWAD
ICAR - KRISHI VIGYAN KENDRA
SAIDAPUR FARM, DHARWAD -580 005
Newsletter

Volume: 11 | Issue: 3 | July-September, 2015

## Krishi Mela-2015 "Farmers' self esteem – farm stability"





With the theme of "Farmers' Self Esteem – Farm Stability", Krishi Mela-2015 was organized at UAS, Dharwad from 27-30 September, 2015. The mega event was inaugurated by Sri. Siddaramayya, Hon'ble Chief Minister, Govt. of Karnataka. A total of 11.05 lakh people comprising farmers, farm women, representatives from development departments, agribusiness sectors, NGOs, State Government officials and other stake holders participated in the event. The KVK scientists participated in various committees of Krishi Mela and showcased the latest technologies and crop varieties with live samples.

During this mela, Shri. Vijayendra Gurunath Nadajoshi of Parasapur village and Smt. Yallamma Subbanna Subbannavar of Mukkal village, Kalaghatagi Tq. were honoured with district level Shreshta Krishika and Shreshta Krishi Mahile awards of 2015 respectively. During the Krishi Mela, Shri. Santosh Sidramappa Inchala, At: Kanavihonnapur and Smt. Sunanda Siddappa Muttagi, At: Somapur of Dharwad taluk, Shri. Laxman Gadigeppa Morabad, At: Chabbi and Smt. Sunanda Virupakshappa Sogi, At: Amargol of Hubballi taluk, Shri. Prakash Nagappa Banavannavar, At: Tabakadahonnihalli and Kumari Ningavva Shivappa Puradannavar, At: Bogenagarakoppa of Kalaghatagi taluk, Shri. Shankaragouda Basanagouda Patil, At: Bennur and Smt. Neelavva Veerappa Naragund, At: Hebbal of Navalagund taluk, Shri. Kedarappa Kadappa Jathar, At: Ramanakoppa and Smt. Malan Mohammad Hanif Khilladar, At: Gudageri of Kundagol taluk were honoured with taluka level Shreshta Yuva Krishika and Shreshta Yuva Krishi Mahile awards.

## 16th Scientific advisory committee meeting

The 16th Scientific Advisory Committee meeting of KVK, Dharwad was held on 19.09.2015. Dr. B. M. Khadi, Director of Education, UAS, Dharwad, in his presidential remarks appreciated the activities and suggested to take up the demonstrations on UAS technologies which are to be released and also to include training programmes on weedicides. Dr. D. V. Shrinivas Reddy, Principal Scientist (Agronomy), ICAR-ATARI, Zone-VIII, Bengaluru said to have cluster demonstrations on oilseeds and pulses under National Food Security Mission in areas where *kharif* has failed. He also suggested to take up front line demonstrations at KVK premises and expose the farmers to the demonstrations during the training programmes. Dr. V. I. Benagi, Director of Extension, UAS, Dharwad briefed about the KVK activities and informed to provide scientific information on weedicides and pesticides for agri input dealers. Dr. S. M. Mantur, Senior Scientist and Head, KVK, Dharwad presented the progress report, action taken on previous SAC meeting and action plan for the current year. During this occasion, Members of Scientific Advisory Committee and representatives from farming community actively involved and gave suggestions for development of KVK.




## Kharif awareness programme

The Krishi Vigyan Kendra, University of Agricultural Sciences, Dharwad organized *Kharif* Awareness Programme cum Exhibition accompanied by scientists-farmers interaction at MP's Adarsh Gram-Harobelavadi on 19th July 2015. Inaugurating the programme, Shri Pralhad Joshi, Hon'ble Member of Parliament and Chief Guest, expressed that in the recent past, due to unscientific management, the cost of crop production is increasing and thus the farmers committing suicide has up surged. In this context, he suggested the Agricultural University to organize the programs that enhance farmers self confidence. Addressing the gathering, Dr. D. P. Biradar, Vice Chancellor in his Presidential remarks said that in order to build up self confidence in farmers, UAS, Dharwad has started “Raita Chetana” helpline through which farmers can get solutions to agriculture related problem. He also expressed that efforts shall be made to modify Harobelavdi as Adarsh Gram. During this occasion, Shri Sharanappa Amminabhavi and Shri Doddappa Bandiwad, Progressive Farmers and beneficiaries of protected cultivation demonstration under KVK, welcomed Hon'ble MP and Vice Chancellor with the gerbera flowers cultivated in their own polyhouses. Dr. B. M. Khadi, Director of Research, UAS, Dharwad welcomed the delegates and delivered introductory remarks. During the campaign, Smt. Kasturi Ashtagi, Member and President, Social Justice Committee, Zilla Panchayat, Dharwad, Shri Basavaraj Kundagol, President, Krishika Samaj, Dharwad, Shri Mahesh Yeligar, Vice President, Taluka Panchayat, Dharwad, Shri Amrut Desai, Member, Zilla Panchayat, Dharwad and Smt. Yallavva Bhovi, Vice President, Gram Panchayat, Harobelavadi were present. Dr. K. V. Natikar, Associate Director of Extension, Dr. N. K. Biradarpatil, Special Officer(Seeds), UAS, Dharwad and Dr. Anand R. Gupta, Deputy Director, Dept. of Animal Husbandry, Dharwad arrived as special invitees. Dr. R. H. Patil, Dr. B. S. Yenagi, Dr. P. R. Dharmatti, Dr. Shripad Kulkarni, Dr. C. R. Patil, Dr. B. C. Kamanna, Dr. B. S. Nandihalli, Dr. Ramesh Babu, Dr. S. D. Kololgi, Dr. S. Rajakumar and Dr. Hemalatha S., Scientists of UAS, Dharwad served as resource persons and discussed on scientific farming, dairying, food processing and value addition. An exhibition displaying farmers friendly technologies was also organized. At the end, an interaction session of scientists-farmers was held. The campaign cum exhibition was organized under the leadership of Dr. S. M. Mantur, Senior Scientist and Head, KVK, Dharwad. More than 500 farmers and farm women from villages in and around Harobelavadi participated in the programme.





## Diagnostic visit to onion plot

The scientists of Krishi Vigyan Kendra made a diagnostic visit to 70 days old onion crop cultivated under protected irrigation in Shri. Basavaraj Mulimani, Bandiwad village of Hubballi taluk on 17.08.2015. On observation, the leaves were found to be yellow and wilted. Keen observation revealed the presence of *Helicoverpa armigera* insect which eats green content, leaving behind white spots followed by destruction of the entire crop. Spraying 0.25 g Flubendiamide or 0.25 ml Spinosad or 0.2 g Emamectin benzoate or 2.0 ml Profenofos or 2.0 ml Quinolphos or 0.5 ml Lambda Cyhalothrin per litre of water was suggested to control the insect. Dr. K. P. Gundannavar and Dr. S. M. Hiremath, Scientists of Krishi Vigyna Kendra conducted the survey.





## Field experience training of probationary scientists of Hyderabad





Field Experience Training for probationary scientists of ICAR-National Academy of Agricultural Research Management, Hyderabad was organized in collaboration with Krishi Vigyan Kendra, Dharwad at Somapur village of Dharwad taluk from 8-28 August, 2015(21 days). During the training programme, the probationary officers with the help of Somapur farmers depicted the agricultural and resources map of Somapur village. The agriculture seminar at village level was organized on 21.08.2015 which was broadcasted in Doordarshan. Vanamahotsava was celebrated in the school premises with planting material provided by the scientists as memorable gift. Similarly, Institutional Seminar of the probationary scientists was organized at Krishi Vigyan Kendra, Dharwad on 22.08.2015. Dr. S. M. Mantur, Senior Scientist and Head, KVK, Dharwad, Dr. Bharat S. Sontakki, Principal Scientist (Agril. Extension), NAARM, Hyderabad, IGFRI-Southern Regional Station, Dharwad, IIPR Pulse Research Station, Dharwad, IARI-Regional Research Station, Dharwad and Scientists, UAS, Dharwad participated in the seminar.









## Training programmes

Under the front line demonstration on promotion of inland fisheries, off campus training programme was organized at farm pond of Shri Praveen Sherewad, Ballarawad village of Navalagund taluk on 13.07.2015. Dr. S. M. Mantur, Senior Scientist and Head, KVK, Dharwad, inaugurated the training programme by releasing rahu, catla and common carp fingerlings into the farm pond. Dr. K. V. Basavakumar, Scientist (Fisheries), UAS, Dharwad explained the scientific method of fish rearing along with demonstration to more than 25 farmers. Similarly, fingerlings were released at farm ponds of Nalavadi and Sotakanal by Dr. S. M. Hiremath and Dr. K. P. Gundannavar of KVK, Dharwad and initiated the activity.

On campus training programme on integrated dairy farming was organized to field facilitators of Chaitanya India Fin Credit Pvt. Ltd. of Chitradurga, Dharwad, Koppal, Davanagere and Belagavi districts on 20.07.2015 at KVK, Dharwad. Dr. S. M. Mantur, Senior Scientist and Head, KVK, Dharwad highlighted on importance of dairying which is essential for agriculture and profitable. Also Dr. V. S. Kulkarni, Head, Dairy Unit, UAS, Dharwad discussed on different breeds of cow, buffalo, enhancing milching capacity and precautionary measures to be taken while purchasing the animals; Dr. Bhagirati Pugashetti, Professor, Animal Husbandry explained on artificial insemination; Dr. S. D. Kololgi, Professor, Dairy Unit on scientific dairy farming; Dr. Anil S. Patil, Veterinary Doctor on diseases of animals, symptoms and preventive measures; Dr. M. D. Martur and Dr. Javed Mulla, Professors, Animal Husbandry provided information on fodder cultivation and buffalo grazing methods with demonstration. Shri L. Jayasheelan, Divisional Manager, and Shri Sandeep Adhyantaya, Manager of regional office, Chaitanya India Fin Credit Pvt. Ltd. participated in the training programme. More than 30 extension functionaries were benefited from the programme.









## Exhibition




KVK Scientists representing UAS, Dharwad participated in the exhibition organized on the eve of centenary celebration of Primary Agricultural Credit Co-operative Society, Amargol from 10-12 July, 2015. Shri Radha Mohan Singh, Hon'ble Agriculture Minister, Govt. of India, Shri Pralhad Joshi, Hon'ble Member of Parliament and Dr. D. P. Biradar, Hon'ble Vice Chancellor, UAS, Dharwad visited the stalls.

## Participation of scientists in rural agriculture work experience programme

Under Rural Agriculture Work Experience programme, Dr. Uma N. Kulkarni (16-23.08.2015), Dr. S. M. Hiremath and Dr. K. P. Gundannavar (13-20.09.2015), KVK scientists served as resource persons for RAWE-final year B. Sc. (Agri. And Agril. Marketing) students at Shishuvinahal, Tq. Shiggaon, Asundi-Saundatti-Munavalli and Muragod-Yaragatti, Tq. Saundatti.




## VIPs visits to different demonstration units of KVK



Dr. D. V. Kolekar, Scientist (Animal Science), ICAR-ATARI, Zone-VIII, Bengaluru visited Goat Rearing Unit on 21.08.2015.



Dr. V. I. Benagi, Director of Extension, UAS, Dharwad along with delegation of scientists from Nepal visited different demonstration units on 03.09.2015.



Dr. D. V. Shrinivas Reddy, Principal Scientist (Agronomy), ICAR-ATARI, Zone-VIII, Bengaluru visited farm and demonstration units of KVK and discussed with scientists on 19.09.2015.

**Editor & Publisher** : **Dr. S. M. Mantur**
Senior Scientist and Head, ICAR-Krishi Vigyan Kendra, Dharwad

**Associate Editors** : **Dr. Uma N. Kulkarni**, **Dr. K. P. Gundannavar**, **Dr. S. M. Hiremath**, **Dr. Shobha U. Immadi**, **Shri C. J. Kumar**, **Smt. Shailaja N. Galagali**, **Shri Ningappa**

**Type Setting and Design** : **Shri. Ulavappa Shivoji,** DTP Unit, Publicattion Center, UAS, Dharwad

**From,**
**Senior Scientist and Head**
**ICAR-Krishi Vigyan Kendra, Saidapur Farm**
**Dharwad 580 005 (Karnataka)**
**Telephone : 0836-2444272**
**E-mail : pc_kvkd@rediffmail.com**
**Website : www.kvkdharwad.org**
**Mobile : 94484 95342**

**To,**

**Book Post**

**For free kisan mobile advisory services, please call 0836-2444272 / visit www.kvkdharwad.org for registration**



ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಭಾ.ಕೃ.ಸಂ.ಮಂ.- ಕೃಷಿ ವಿಜ್ಞಾನ ಕೇಂದ್ರ
ಸೈದಾಪುರ ಫಾರ್ಮ, ಧಾರವಾಡ -580 005
ವಾರ್ತಾ ಪತ್ರ

ಸಂಪುಟ: 11 ಸಂಚಿಕೆ: 3 ಜುಲೈ-ಸೆಪ್ಟೆಂಬರ್, 2015

## ಕೃಷಿ ಮೇಳ-2015, "ಕೃಷಿಕರ ಆತ್ಮಸ್ಥೈರ್ಯ ವೃದ್ಧಿ - ಕೃಷಿ ಕ್ಷೇತ್ರದ ಅಭಿವೃದ್ಧಿ"







ಕೃಷಿ ವಿಶ್ವವಿದ್ಯಾಲಯ, ಧಾರವಾಡದ 2015 ನೇ ಸಾಲಿನ ಕೃಷಿ ಮೇಳವನ್ನು "ಕೃಷಿಕರ ಆತ್ಮಸ್ಥೈರ್ಯ ವೃದ್ಧಿ – ಕೃಷಿ ಕ್ಷೇತ್ರದ ಅಭಿವೃದ್ಧಿ" ಎಂಬ ಧ್ಯೆಯೋದ್ಧೇಶದೊಂದಿಗೆ ದಿನಾಂಕ 27 ರಿಂದ 30 ಸೆಪ್ಟೆಂಬರ್ 2015 ರವರೆಗೆ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ಸರಕಾರದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಕೃಷಿಮೇಳಕ್ಕೆ ಚಾಲನೆ ನೀಡಿದರು. ಈ ಮೇಳಕ್ಕೆ ಸುಮಾರು 11.05 ಲಕ್ಷ ಜನರು ಕೃಷಿ ಸಂಬಂಧಿತ ಸಂಶೋಧನಾ ತಾಕು ಹಾಗೂ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ಮಾಹಿತಿ ಪಡೆದರು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು, ಕೃಷಿ ಮೇಳದ ವಿವಿಧ ಸಮಿತಿಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ನೂತನ ತಳಿ ಹಾಗೂ ಸುಧಾರಿತ ತಂತ್ರಜ್ಞಾನಗಳನ್ನು ಪ್ರದರ್ಶಿಸಿ ರೈತ ಸಮುದಾಯಕ್ಕೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಕಲಘಟಗಿ ತಾಲೂಕಿನ ಪರಸಾಪುರ ಗ್ರಾಮದ ಪ್ರಗತಿಪರ ರೈತರಾದ ಶ್ರೀ ವಿಜಯೇಂದ್ರ ಗುರುನಾಥ ನಾಡಜೋಶಿ ಹಾಗೂ ಕಲಘಟಗಿ ತಾಲೂಕಿನ ಮುಕ್ಕಲ ಗ್ರಾಮದ ಶ್ರೀಮತಿ ಯಲ್ಲಮ್ಮ ಸುಬ್ಬಣ್ಣ ಸುಬ್ಬಣ್ಣವರ ಇವರುಗಳಿಗೆ ಅನುಕ್ರಮವಾಗಿ 2015 ನೇ ಸಾಲಿನ ಶ್ರೇಷ್ಠ ಕೃಷಿಕ ಹಾಗೂ ಶ್ರೇಷ್ಠ ಕೃಷಿ ಮಹಿಳೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಇದರಂತೆ ಧಾರವಾಡ ತಾಲೂಕಿನಿಂದ ಶ್ರೀ ಸಂತೋಷ ಸಿದ್ರಾಮಪ್ಪ ಇಂಚಲ, ಸಾ: ಕಣವಿಹೊನ್ನಾಪುರ ಮತ್ತು ಶ್ರೀಮತಿ ಸುನಂದಾ ಶಿದ್ದಪ್ಪ ಮುತ್ತಗಿ, ಸಾ: ಸೋಮಾಪುರ, ಹುಬ್ಬಳ್ಳಿ ತಾಲೂಕಿನಿಂದ ಶ್ರೀ ಲಕ್ಷ್ಮಣ ಗದಿಗೆಪ್ಪ ಮೊರಬದ, ಸಾ: ಛಬ್ಬಿ ಮತ್ತು ಶ್ರೀಮತಿ ಸುನಂದಾ ವಿರುಪಾಕ್ಷಪ್ಪ ಸೋಗಿ, ಸಾ: ಅಮರಗೋಳ, ಕಲಘಟಗಿ ತಾಲೂಕಿನಿಂದ ಶ್ರೀ ಪ್ರಕಾಶ ನಾಗಪ್ಪ ಬನವಣ್ಣವರ, ಸಾ: ತಬಕದಹೊನ್ನಿಹಳ್ಳಿ ಮತ್ತು ಕುಮಾರಿ ನಿಂಗವ್ವ ಶಿವಪ್ಪ ಪುರದಣ್ಣವರ, ಸಾ: ಬೋಗೇನಾಗರಕೊಪ್ಪ, ನವಲಗುಂದ ತಾಲೂಕಿನಿಂದ ಶ್ರೀ ಶಂಕರಗೌಡ ಬಸನಗೌಡ ಪಾಟೀಲ, ಸಾ: ಬೆನ್ನೂರ ಮತ್ತು ಶ್ರೀಮತಿ ನೀಲವ್ವ ವೀರಪ್ಪ ನರಗುಂದ, ಸಾ: ಹೆಬ್ಬಾಳ ಹಾಗೂ ಕುಂದಗೋಳ ತಾಲೂಕಿನಿಂದ ಶ್ರೀ ಕೇದಾರಪ್ಪ ಕಡಪ್ಪ ಜಠಾರ, ಸಾ: ರಾಮನಕೊಪ್ಪ ಮತ್ತು ಶ್ರೀಮತಿ ಮಾಲನ್ ಮಹಮ್ಮದ ಹನೀಫ ಕಿಲ್ಲೇದಾರ, ಸಾ: ಗುಡಗೇರಿ ಇವರುಗಳಿಗೆ ಶ್ರೇಷ್ಠ ಯುವ ಕೃಷಿಕ ಹಾಗೂ ಶ್ರೇಷ್ಠ ಯುವ ಕೃಷಿಮಹಿಳೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

## 16 ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆ

ಕೇಂದ್ರದ 16 ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆಯನ್ನು ದಿನಾಂಕ 19.09.2015 ರಂದು ಆಯೋಜಿಸಲಾಗಿತ್ತು. ಧಾರವಾಡ ಕೃಷಿ ವಿಶ್ವವಿದ್ಯಾಲಯದ ಶಿಕ್ಷಣ ನಿರ್ದೇಶಕರಾದ ಡಾ. ಬಿ. ಎಮ್. ಖಾದಿ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಕೇಂದ್ರದ ಕಾರ್ಯ ಚಟುಚಟಿಕೆಗಳ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿ, ವಿಶ್ವವಿದ್ಯಾಲಯದಿಂದ ಬಿಡುಗಡೆ ಹಂತದಲ್ಲಿರುವ ತಂತ್ರಜ್ಞಾನಗಳನ್ನು ಸಹ ಪ್ರಾತ್ಯಕ್ಷಿಕೆ ಹಾಗೂ ಕಳೆನಾಶಕಗಳ ಬಳಕೆ ಕುರಿತು ತರಬೇತಿಗಳನ್ನು ಹಮ್ಮಿಕೊಳ್ಳಲು ಸೂಚಿಸಿದರು. ಬೆಂಗಳೂರಿನ ICAR-ATARI, ವಲಯ–8 ರ ಬೇಸಾಯಶಾಸ್ತ್ರದ ಪ್ರಧಾನ ವಿಜ್ಞಾನಿಗಳಾದ ಡಾ. ಡಿ. ವಿ. ಶ್ರೀನಿವಾಸ ರೆಡ್ಡಿ ಇವರು ಮುಂಗಾರು ಹಂಗಾಮು ವಿಫಲವಾದ ಕ್ಷೇತ್ರಗಳಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ಎಣ್ಣೆಕಾಳು ಹಾಗೂ ಬೆಳೆಕಾಳುಗಳ ಗುಂಪು ಪ್ರಾತ್ಯಕ್ಷಿಕೆ ಕೈಗೊಳ್ಳುವಂತೆ ಸಲಹೆ ನೀಡಿದರು. ಇದಲ್ಲದೇ ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಸಹ ಕೇಂದ್ರದ ಆವರಣದಲ್ಲಿಯೂ ಸಹ ಕೈಗೊಂಡು ಪ್ರತಿ ತರಬೇತಿಗಳಲ್ಲಿ ರೈತರಿಗೆ ಪ್ರಾತ್ಯಕ್ಷಿಕೆಯ ಮಾಹಿತಿ ನೀಡುವಂತೆ ಸೂಚಿಸಿದರು. ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಡಾ. ವಿ. ಐ. ಬೆಣಗಿ, ಇವರು ಕೇಂದ್ರದ ಕಾರ್ಯ ಚಟುವಟಿಕೆ ಕುರಿತು ಮಾಹಿತಿ ನೀಡಿ ಮುಂಬರುವ ದಿನಗಳಲ್ಲಿ ಕೃಷಿ ಪರಿಕರಗಳ ಪೂರೈಕೆದಾರರಿಗೂ ಕಳೆನಾಶಕ ಹಾಗೂ ಪೀಡೆನಾಶಕಗಳ ಕುರಿತು ವೈಜ್ಞಾನಿಕ ಮಾಹಿತಿ ನೀಡುವಂತೆ ಸೂಚಿಸಿದರು. ಕೇಂದ್ರದ ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರಾದ ಡಾ. ಎಸ್. ಎಂ. ಮಂಟೂರ ಇವರು ಹಿಂದಿನ ಸಭೆಯ ನಡಾವಳಿಗಳ ಮೇಲೆ ತೆಗೆದುಕೊಂಡ ಕ್ರಮ, ಪ್ರಗತಿಯ ವರದಿ ವಿವರಿಸಿ, ಪ್ರಸಕ್ತ ಸಾಲಿನ ಕ್ರಿಯಾ ಯೋಜನೆ ಮಂಡಿಸಿದರು. ಸದರಿ ಕಾರ್ಯಕ್ರಮದಲ್ಲಿ ವೈಜ್ಞಾನಿಕ ಸಲಹಾ ಸಮಿತಿ ಸದಸ್ಯರು ಹಾಗೂ ರೈತ ಪ್ರತಿನಿಧಿಗಳು ಭಾಗವಹಿಸಿ ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು.





## ಮುಂಗಾರು ಕೃಷಿ ಜಾಗೃತಿ ಕಾರ್ಯಕ್ರಮ

ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕೃಷಿ ವಿಜ್ಞಾನ ಕೇಂದ್ರ ವತಿಯಿಂದ ಮಾನ್ಯ ಸಂಸದರ ಆದರ್ಶ ಗ್ರಾಮವಾದ **ಹಾರೋಬೆಳವಡಿ**ಯಲ್ಲಿ ದಿನಾಂಕ: 19.07.2015 ರಂದು **ಮುಂಗಾರು ಕೃಷಿ ಜಾಗೃತಿ, ವಸ್ತು ಪ್ರದರ್ಶನ ಹಾಗೂ ರೈತ ಮತ್ತು ಕೃಷಿ ವಿಜ್ಞಾನಿಗಳೊಂದಿಗೆ ಸಂವಾದ** ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮಾನ್ಯ ಸಂಸದರಾದ ಶ್ರೀ. ಪ್ರಲ್ಹಾದ ಜೋಶಿಯವರು ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡುತ್ತ ಇತ್ತೀಚೆಗೆ ಕೃಷಿಯಲ್ಲಿ ಅವೈಜ್ಞಾನಿಕ ನಿರ್ವಹಣೆಯಿಂದ ಉತ್ಪಾದನೆ ವೆಚ್ಚ ಹೆಚ್ಚುತ್ತಲಿದ್ದು, ರೈತರ ಆತ್ಮಹತ್ಯೆ ಸಂಖ್ಯೆ ಅಧಿಕಗೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಕೃಷಿ ವಿಶ್ವವಿದ್ಯಾಲಯವು ರೈತರ ಆತ್ಮಸ್ಥೈರ್ಯ ಹೆಚ್ಚಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಡಿ. ಪಿ. ಬಿರಾದಾರ ಇವರು ವಹಿಸಿ ಮಾತನಾಡುತ್ತಾ ರೈತರಲ್ಲಿ ಆತ್ಮಸ್ಥೈರ್ಯ ಮೂಡಿಸುವದಕ್ಕಾಗಿ ವಿಶ್ವವಿದ್ಯಾಲಯದಲ್ಲಿ "ರೈತ ಚೇತನ" ಸಹಾಯವಾಣಿ ಪ್ರಾರಂಭಿಸಿದ್ದು, ಇದರ ಮೂಲಕ ರೈತರು ಕೃಷಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ. ಇದಲ್ಲದೇ ಹಾರೋಬೆಳವಡಿಯನ್ನು ಮಾದರಿ ಕೃಷಿ ಗ್ರಾಮವನ್ನಾಗಿ ಮಾಡಲು ಕೃಷಿ ವಿಶ್ವವಿದ್ಯಾಲಯ, ಧಾರವಾಡವು ಸದಾ ಸನ್ನದ್ಧವಾಗಿದೆ ಎಂದು ಪ್ರತಿಪಾದಿಸಿದರು. ಇದೇ ಸಂದರ್ಭದಲ್ಲಿ ಕೇಂದ್ರದ ವತಿಯಿಂದ ಕೈಗೊಂಡ ಸಂರಕ್ಷಿತ ಕೃಷಿಯ ಪ್ರಾತ್ಯಕ್ಷಿಕೆ ಫಲಾನುಭವಿಗಳಾದ ಶ್ರೀ. ಶರಣಪ್ಪ ಅಮ್ಮಿನಭಾವಿ ಹಾಗೂ ಶ್ರೀ. ದೊಡ್ಡಪ್ಪ ಬಂಡಿವಾಡ, ಇವರುಗಳು ತಾವು ಹಸಿರು ಮನೆಯಲ್ಲಿ ಬೆಳೆದ ಜರ್ಬೆರಾ ಹೂಗಳನ್ನು ಸಂಸದರಿಗೆ ಹಾಗು ಅಧ್ಯಕ್ಷರಿಗೆ ನೀಡಿ ರೈತರ ಪರವಾಗಿ ಸ್ವಾಗತಿಸಿದರು. ಕಾರ್ಯಕ್ರಮಕ್ಕೆ ಸರ್ವರನ್ನೂ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕರಾದ ಡಾ. ಬಿ. ಎಮ್. ಖಾದಿ ಇವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀಮತಿ ಕಸ್ತೂರಿ ಅಷ್ಟಗಿ, ಸದಸ್ಯರು ಹಾಗೂ ಅಧ್ಯಕ್ಷರು, ಸಮಾಜಿಕ ನ್ಯಾಯ ಸ್ಥಾಯಿ ಸಮಿತಿ, ಜಿಲ್ಲಾ ಪಂಚಾಯತ, ಧಾರವಾಡ, ಶ್ರೀ. ಬಸವರಾಜ ಕುಂದಗೋಳ, ಅಧ್ಯಕ್ಷರು, ಕೃಷಿಕ ಸಮಾಜ, ಧಾರವಾಡ, ಶ್ರೀ ಮಹೇಶ ಎಲಿಗಾರ, ಉಪಾಧ್ಯಕ್ಷರು, ತಾಲೂಕ ಪಂಚಾಯತ, ಧಾರವಾಡ, ಶ್ರೀ. ಅಮೃತ ದೇಸಾಯಿ, ಸದಸ್ಯರು, ಜಿಲ್ಲಾ ಪಂಚಾಯತ, ಧಾರವಾಡ ಹಾಗೂ ಶ್ರೀಮತಿ. ಯಲ್ಲವ್ವ ಭೋವಿ, ಉಪಾಧ್ಯಕ್ಷರು, ಗ್ರಾಮ ಪಂಚಾಯತ, ಹಾರೋಬೆಳವಡಿ ಮುಂತಾದವರು ಉಪಸ್ಥಿತರಿದ್ದರು. ವಿಶೇಷ ಆಹ್ವಾನಿತರಾಗಿ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ಸಹ ನಿರ್ದೇಶಕರಾದ ಡಾ. ಕೆ. ವಿ. ನಾಟಿಕರ, ಡಾ. ಎನ್. ಕೆ. ಬಿರಾದಾರಪಾಟೀಲ, ವಿಶೇಷ ಅಧಿಕಾರಿಗಳು (ಬೀಜ) ಹಾಗೂ ಜಿಲ್ಲಾ ಪಶುಪಾಲನಾ ಇಲಾಖೆಯ ಉಪನಿರ್ದೇಶಕರಾದ ಡಾ. ಆನಂದ ಆರ್. ಗುಪ್ತಾ ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳಾದ ಡಾ. ಬಿ. ಎಸ್. ಏಣಗಿ, ಡಾ. ಪಿ. ಆರ್. ಧರ್ಮಟ್ಟಿ, ಡಾ. ಶ್ರೀಪಾದ ಕುಲಕರ್ಣಿ, ಡಾ. ಸಿ. ಆರ್. ಪಾಟೀಲ, ಡಾ. ಬಿ. ಎಸ್. ನಂದಿಹಳ್ಳಿ, ಡಾ. ಬಿ. ಸಿ. ಕಾಮಣ್ಣ, ಡಾ. ರಮೇಶಬಾಬು, ಡಾ. ಎಸ್. ಡಿ. ಕಲ್ಲೋಳಗಿ, ಡಾ. ಎಸ್. ರಾಜಕುಮಾರ, ಡಾ. ಆರ್. ಎಚ್. ಪಾಟೀಲ ಹಾಗೂ ಡಾ. ಹೇಮಲತಾ ಎಸ್. ಇವರುಗಳು ವೈಜ್ಞಾನಿಕ ಕೃಷಿ, ಹೈನುಗಾರಿಕೆ ಹಾಗೂ ಆಹಾರ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಕುರಿತು ಮಾಹಿತಿ ನೀಡಿದರು. ಕೇಂದ್ರದ ಮುಖ್ಯಸ್ಥರಾದ ಡಾ. ಎಸ್. ಎಂ. ಮಂಟೂರ ಇವರ ನೇತೃತ್ವದಲ್ಲಿ ಸದರಿ ಕಾರ್ಯಕ್ರಮ ಹಾಗೂ ಕೃಷಿ ವಸ್ತು ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು. ಹಾರೋಬೆಳವಡಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ 500 ಕ್ಕಿಂತ ಹೆಚ್ಚು ರೈತ ಹಾಗೂ ರೈತ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





## ಈರುಳ್ಳಿ ಕ್ಷೇತ್ರಕ್ಕೆ ವಿಶ್ಲೇಷಣಾತ್ಮಕ ಭೇಟಿ

ಹುಬ್ಬಳ್ಳಿ ತಾಲೂಕಿನ ಬಂಡಿವಾಡ ಗ್ರಾಮದ ಶ್ರೀ ಬಸವರಾಜ ಮೂಲಿಮನಿ ಇವರ ರಕ್ಷಿತ ನೀರಾವರಿಯ ಕ್ಷೇತ್ರದಲ್ಲಿ ಬಿತ್ತನೆಯಾದ 70 ದಿವಸದ ಈರುಳ್ಳಿ ಕೀಟಬಾಧಿತ ಕ್ಷೇತ್ರಕ್ಕೆ ಧಾರವಾಡ ಕೃಷಿ ವಿಜ್ಞಾನ ಕೇಂದ್ರ ವಿಜ್ಞಾನಿಗಳು ದಿನಾಂಕ: 17.08.2015 ರಂದು ಭೇಟಿ ನೀಡಿ, ಬೆಳೆಯನ್ನು ಪರೀಕ್ಷಿಸಿದಾಗ ಎಲೆಗಳು ಹಳದಿ ವರ್ಣಕ್ಕೆ ತಿರುಗಿ ಒಣಗಿರುವುದು ಕಂಡು ಬಂದಿತು. ಬಾಧಿತ ಬೆಳೆಯ ಎಲೆಗಳನ್ನು ಕೂಲಂಕುಷವಾಗಿ ಪರೀಕ್ಷಿಸಿದಾಗ ಹೆಲಿಕೋವರ್ಪಾ ಆರ್ಮಿಜರಾ ಕೀಟದ ಇರುವಿಕೆ ಕಂಡು ಬಂದಿದೆ. ಈ ಕೀಟವು ಪ್ರಾರಂಭಿಕ ಹಂತದಲ್ಲಿ ಎಲೆಗಳ ಹಸಿರು ಭಾಗವನ್ನು ಕೆರೆದು ತಿಂದು ಬಿಳಿಯ ಮಚ್ಚೆ ಉಂಟು ಮಾಡುತ್ತದೆ. ತದನಂತರ ಈ ಕೀಟವು ಸಂಪೂರ್ಣ ಎಲೆಯನ್ನು ತಿಂದು ಬೆಳೆ ನಾಶವಾಗಿದ್ದು ಕಂಡು ಬಂದಿದೆ. ಈ ಕೀಟದ ಹತೋಟಿಗಾಗಿ 0.25 ಗ್ರಾಂ ಫ್ಲುಬೆಂಡಿಮೈಡ್ ಅಥವಾ 0.25 ಮಿ.ಲೀ. ಸ್ಪೈನೊಸಾಡ್ ಅಥವಾ 0.2 ಗ್ರಾಂ ಇಮಾಮೆಕ್ಟಿನ್ ಬೆಂಜೋಯೆಟ್ ಅಥವಾ 2.0 ಮಿ.ಲೀ. ಪ್ರೊಫೆನೋಫಾಸ್ ಅಥವಾ 2.0 ಮಿ.ಲೀ. ಕ್ವಿನಾಲ್‌ಫಾಸ್ ಅಥವಾ 0.5 ಮಿ.ಲೀ. ಲಾಂಬ್ಡಾಸಿಹ್ಯಾಲೊಥ್ರಿನ್ ಕೀಟನಾಶಕವನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸುವದರಿಂದ ಕೀಟ ಹತೋಟಿ ಸಾಧ್ಯ. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ಕೆ. ಪಿ. ಗುಂಡಣ್ಣವರ ಮತ್ತು ಡಾ. ಎಸ್. ಎಂ. ಹಿರೇಮಠ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದರು.





# ಹೈದರಾಬಾದಿನ ಕೃಷಿ ಸಂಶೋಧನಾ ಪರೀಕ್ಷಾ ಅವಧಿಯ ವಿಜ್ಞಾನಿಗಳ ಕೃಷಿ ಅನುಭವ ತರಬೇತಿ





ಭಾ.ಕೃ.ಸಂ.ಮಂ.–ರಾಷ್ಟ್ರೀಯ ಕೃಷಿ ಸಂಶೋಧನಾ ನಿರ್ವಹಣಾ ಸಂಸ್ಥೆ, ಹೈದರಾಬಾದ್‌ನ ಪರೀಕ್ಷಾ ಅವಧಿಯ ವಿಜ್ಞಾನಿಗಳಿಗೆ ಧಾರವಾಡ ತಾಲೂಕಿನ ಸೋಮಾಪುರ ಗ್ರಾಮದಲ್ಲಿ ತಮ್ಮ ಕೃಷಿ ಅನುಭವ ತರಬೇತಿಯನ್ನು ಕೃಷಿ ವಿಜ್ಞಾನ ಕೇಂದ್ರ, ಧಾರವಾಡದ ಸಹಭಾಗಿತ್ವದಲ್ಲಿ ಅಗಸ್ಟ 8–28, 2015 (21 ದಿನಗಳು) ರವರೆಗೆ ಕೈಗೊಳ್ಳಲಾಗಿತ್ತು. ತರಬೇತಿಯ ಅಂಗವಾಗಿ ವಿಜ್ಞಾನಿಗಳು ಸೋಮಾಪುರ ರೈತರ ಸಹಭಾಗಿತ್ವದಲ್ಲಿ ಗ್ರಾಮದ ಕೃಷಿ ಚಿತ್ರಣ ಹಾಗೂ ಸಂಪನ್ಮೂಲ ಮಾಹಿತಿಯನ್ನು ರಂಗೋಲಿ ನಕಾಶೆ ಮುಖಾಂತರ ಪ್ರದರ್ಶಿಸಿದರು. ಗ್ರಾಮ ಮಟ್ಟದಲ್ಲಿ ಕೃಷಿ ವಿಚಾರ ಸಂಕಿರಣ ಕಾರ್ಯಕ್ರಮವನ್ನು ದಿ. 21.08.2015 ರಂದು ಸೋಮಾಪುರದಲ್ಲಿ ಆಯೋಜಿಸಲಾಗಿತ್ತು. ಈ ಕೃಷಿ ವಿಚಾರ ಸಂಕಿರಣದ ಮಾಹಿತಿ ದೂರದರ್ಶನದಲ್ಲಿಯೂ ಸಹ ಬಿತ್ತರಗೊಂಡಿತು. ಪರೀಕ್ಷಾರ್ಥಿಗಳ ನೆನಪಿನ ಕಾಣಿಕೆಯಾಗಿ ಶಾಲಾ ಆವರಣದಲ್ಲಿ ವನಮಹೋತ್ಸವವನ್ನು ಆಚರಿಸಲಾಯಿತು. ಇದೇ ತರನಾಗಿ ದಿ. 22.08.2015 ರಂದು ಕೃಷಿ ವಿಜ್ಞಾನ ಕೇಂದ್ರದಲ್ಲಿಯೂ ಇನ್‌ಸ್ಟಿಟ್ಯೂಷನಲ್ ಪರೀಕ್ಷಾರ್ಥಿಗಳ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಕೇಂದ್ರದ ಮುಖ್ಯಸ್ಥರಾದ ಡಾ. ಎಸ್. ಎಂ. ಮಂಟೂರ, ಹೈದರಾಬಾದಿನ ಕೃಷಿ ವಿಸ್ತರಣೆ ಪ್ರಧಾನ ವಿಜ್ಞಾನಿಗಳಾದ ಡಾ. ಭರತ್ ಎಸ್. ಸೊಂಟಕ್ಕಿ, ಐಜಿಎಫ್‌ಆರ್‌ಐ, ಐಐಪಿಆರ್–ಬೇಳೆಕಾಳು ಸಂಶೋಧನಾ ಕೇಂದ್ರ, ಐಎಆರ್‌ಐ–ಪ್ರಾದೇಶಿಕ ಸಂಶೋಧನಾ ಕೇಂದ್ರ ಹಾಗೂ ಕೃಷಿ ವಿಶ್ವವಿದ್ಯಾಲಯ, ಧಾರವಾಡದ ವಿಜ್ಞಾನಿಗಳು ಭಾಗವಹಿಸಿದ್ದರು.









# ತರಬೇತಿ ಕಾರ್ಯಕ್ರಮಗಳು

ನವಲಗುಂದ ತಾಲೂಕಿನ ಬಲ್ಲರವಾಡ ಗ್ರಾಮದ ಶ್ರೀ ಪ್ರವೀಣ ಶೆರೆವಾಡ ಇವರ ಕ್ಷೇತ್ರದಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆ ಅಡಿಯಲ್ಲಿ ಒಳನಾಡು ಮೀನು ಕೃಷಿ ಕುರಿತು ಹೊರ ಆವರಣ ತರಬೇತಿಯನ್ನು ದಿ. 13.07.2015 ರಂದು ಆಯೋಜಿಸಲಾಗಿತ್ತು. ಕೇಂದ್ರದ ಮುಖ್ಯಸ್ಥರಾದ ಡಾ. ಎಸ್. ಎಂ. ಮಂಟೂರ ಇವರು ಕೃಷಿ ಹೊಂಡಕ್ಕೆ ರಹು, ಕಟ್ಲಾ ಮತ್ತು ಕಾಮನ್ ಕಾರ್ಪ್ ತಳಿಯ ಮೀನು ಮರಿಗಳನ್ನು ಬಿಡುವುದರ ಮುಖಾಂತರ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವಿಶ್ವವಿದ್ಯಾಲಯದ ಮೀನುಗಾರಿಕೆ ತಜ್ಞರಾದ ಡಾ ಕೆ.ವಿ.ಬಸವಕುಮಾರ ಇವರು ವೈಜ್ಞಾನಿಕ ಮೀನು ಕೃಷಿಯ ಮಾಹಿತಿಯನ್ನು ಪ್ರಾತ್ಯಕ್ಷಿಕೆಯೊಂದಿಗೆ 25 ಕ್ಕೂ ಹೆಚ್ಚು ರೈತರಿಗೆ ಮಾಹಿತಿ ಒದಗಿಸಿದರು. ಇದೇ ತರನಾಗಿ ಕೇಂದ್ರದ ವಿಜ್ಞಾನಿಗಳಾದ ಡಾ ಎಸ್. ಎಂ. ಹಿರೇಮಠ ಹಾಗೂ ಡಾ. ಕೆ. ಪಿ. ಗುಂಡಣ್ಣವರ ಇವರುಗಳು ನಲವಡಿ ಹಾಗೂ ಸೊಟಕನಾಳ ಗ್ರಾಮದ ರೈತರ ಕೃಷಿ ಹೊಂಡಗಳಲ್ಲೂ ಮೀನು ಮರಿಗಳನ್ನು ಬಿಡುವುದರ ಮುಖಾಂತರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಚೈತನ್ಯ ಇಂಡಿಯಾ ಫಿನ್ ಕ್ರೆಡಿಟ್ ಪ್ರೈವೆಟ್ ಲಿಮಿಟೆಡ್‌ನ ಚಿತ್ರದುರ್ಗ, ಧಾರವಾಡ, ಕೊಪ್ಪಳ, ದಾವಣಗೆರೆ ಹಾಗೂ ಬೆಳಗಾವಿ ಜಿಲ್ಲೆಯ ಕ್ಷೇತ್ರಮಟ್ಟದ ಅಧಿಕಾರಿಗಳಿಗೆ "ಸಮಗ್ರ ಹೈನುಗಾರಿಕೆ" ಕುರಿತು ತರಬೇತಿಯನ್ನು ದಿ. 20.07.2015 ರಂದು ಕೇಂದ್ರದ ಆವರಣದಲ್ಲಿ ಆಯೋಜಿಸಲಾಗಿತ್ತು. ಕೇಂದ್ರದ ಮುಖ್ಯಸ್ಥರಾದ ಡಾ. ಎಸ್. ಎಂ. ಮಂಟೂರ ಇವರು ಕೃಷಿಗೆ ಅವಶ್ಯಕವಾದ ಹಾಗೂ ಲಾಭದಾಯಕ ಉದ್ಯಮವಾದ ಹೈನುಗಾರಿಕೆ ಕುರಿತು ಮಾತನಾಡಿದರು. ತರಬೇತಿಯಲ್ಲಿ ವಿವಿಧ ಹಸು/ಎಮ್ಮೆ ತಳಿಗಳು, ಹಾಲಿನ ಸಾಮರ್ಥ್ಯ ವೃದ್ಧಿಸುವಿಕೆ ಹಾಗೂ ದನ ಖರೀದಿ ಮುನ್ನ ಗಮನಿಸಬೇಕಾದ ಮುನ್ನೇಚ್ಚರಿಕೆ ಕುರಿತು ವಿಶ್ವವಿದ್ಯಾಲಯದ ಡೈರಿ ವಿಭಾಗದ ಮುಖ್ಯಸ್ಥರಾದ ಡಾ. ವಿ. ಎಸ್. ಕುಲಕರ್ಣಿ, ಕೃತಕ ಗರ್ಭಧಾರಣೆ ಕುರಿತು ಪಶು ವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಡಾ. ಭಾಗೀರಥಿ ಪುಗಶಟ್ಟಿ, ವೈಜ್ಞಾನಿಕ ಪಶು ಸಾಕಾಣಿಕೆ ಕುರಿತು ಡೈರಿ ವಿಭಾಗದ ಪ್ರಾಧ್ಯಾಪಕರಾದ ಡಾ. ಎಸ್. ಡಿ ಕಲ್ಲೋಳಗಿ, ಜಾನುವಾರುಗಳಿಗೆ ಬಾಧಿಸುವ ಕಾಯಿಲೆ, ಲಕ್ಷಣ ಮತ್ತು ತಡೆಯುವ ವಿಧಾನ ಕುರಿತು ವೈದ್ಯಾಧಿಕಾರಿಗಳಾದ ಡಾ. ಅನಿಲ ಎಸ್. ಪಾಟೀಲ ಹಾಗೂ ಮೇವು ಕೃಷಿ ಹಾಗೂ ದನಗಳನ್ನು ಮೇಯಿಸುವ ವಿಧಾನ ಕುರಿತು ಪಶು ವಿಜ್ಞಾನ ವಿಭಾಗದ ಪ್ರಾಧ್ಯಾಪಕರುಗಳಾದ ಡಾ. ಎಂ. ಡಿ. ಮತ್ತೂರ ಹಾಗೂ ಡಾ. ಜಾವೇದ್ ಮುಲ್ಲಾ ಇವರುಗಳು ಪ್ರಾತ್ಯಕ್ಷಿಕೆ ಮುಖಾಂತರ ಮಾಹಿತಿ ಒದಗಿಸಿದರು. ಚೈತನ್ಯ ಇಂಡಿಯಾ ಫಿನ್ ಕ್ರೆಡಿಟ್ ಪ್ರೈವೆಟ್ ಲಿಮಿಟೆಡ್‌ನ ವಿಭಾಗಿಯ ವ್ಯವಸ್ಥಾಪಕರಾದ ಶ್ರೀ ಎಲ್. ಜಯಶೀಲನ್ ಹಾಗೂ ಪ್ರಾದೇಶಿಕ ಕಛೇರಿಯ ವ್ಯವಸ್ಥಾಪಕರಾದ ಶ್ರೀ ಸಂದೀಪ ಅಧ್ಯಂತಾಯ ಇವರುಗಳು ಭಾಗವಹಿಸಿದ್ದರು. ತರಬೇತಿಯಲ್ಲಿ 30 ಕ್ಕೂ ಹೆಚ್ಚು ವಿಸ್ತರಣಾ ಕಾರ್ಯಕರ್ತರು ಭಾಗವಹಿಸಿದ್ದರು.









## ವಸ್ತುಪ್ರದರ್ಶನ





ಅಮರಗೋಳದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಶತಮಾನೋತ್ಸವದ ಅಂಗವಾಗಿ ದಿ.10–12.07.2015 ರವರೆಗೆ ಆಯೋಜಿಸಿದ ಕೃಷಿ ವಸ್ತುಪ್ರದರ್ಶನದಲ್ಲಿ ಕೃಷಿ ವಿಶ್ವವಿದ್ಯಾಲಯದ ವತಿಯಿಂದ ಕೇಂದ್ರದ ವಿಜ್ಞಾನಿಗಳು ಕೃಷಿ ವಸ್ತುಪ್ರದರ್ಶನ ಏರ್ಪಡಿಸಿದ್ದರು. ಕೇಂದ್ರ ಸರಕಾರದ ಮಾನ್ಯ ಕೃಷಿ ಸಚಿವರಾದ ಶ್ರೀ. ರಾಧಾ ಮೋಹನ್ ಸಿಂಗ್, ಮಾನ್ಯ ಸಂಸದರಾದ ಶ್ರೀ. ಪ್ರಲ್ಹಾದ ಜೋಶಿ ಹಾಗೂ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಡಿ. ಪಿ. ಬಿರಾದಾರ ಇವರು ಮಳಿಗೆಗೆ ಭೇಟಿ ನೀಡಿದರು.

## ಗ್ರಾಮೀಣ ಕೃಷಿ ಅನುಭವ ಕಲಿಕೆ ಅವಧಿಯಲ್ಲಿ ವಿಜ್ಞಾನಿಗಳ ಭಾಗವಹಿಸುವಿಕೆ

ಕೇಂದ್ರದ ವಿಜ್ಞಾನಿಗಳು ಅಂತಿಮ ವರ್ಷದ ಬಿ.ಎಸ್‌ಸಿ. (ಕೃಷಿ ಹಾಗೂ ಕೃಷಿ ಮಾರುಕಟ್ಟೆ) ವಿದ್ಯಾರ್ಥಿಗಳಿಗೆ ಆಯೋಜಿಸಿದ ಗ್ರಾಮೀಣ ಕೃಷಿ ಅನುಭವ ಕಲಿಕೆ ಅವಧಿಯಲ್ಲಿ ಶಿಶುವಿನಹಾಳ (ತಾ. ಶಿಗ್ಗಾಂವ), ಅಸುಂಡಿ – ಸವದತಿ – ಮುನವಳ್ಳಿ (ತಾ. ಸವದತ್ತಿ) ಹಾಗೂ ಮುರಗೋಡ–ಯರಗಟ್ಟಿ (ತಾ.ಸವದತ್ತಿ) ಗ್ರಾಮಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಉಮಾ ಎನ್. ಕುಲಕರ್ಣಿ (ದಿ. 16–23.08.2015 ರವರೆಗೆ), ಡಾ. ಎಸ್. ಎಂ. ಹಿರೇಮಠ ಹಾಗೂ ಡಾ. ಕೆ. ಪಿ. ಗುಂಡಣ್ಣವರ (ದಿ. 13–20.09.2015 ರವರೆಗೆ) ಭಾಗವಹಿಸಿದ್ದರು.





## ಕೃಷಿ ವಿಜ್ಞಾನ ಕೇಂದ್ರದ ವಿವಿಧ ಪ್ರಾತ್ಯಕ್ಷಿಕೆ ಘಟಕಗಳಿಗೆ ಗಣ್ಯರ ಭೇಟಿ



ದಿ. 21.08.2015 ರಂದು ಭಾ.ಕೃ.ಸಂ.ಮಂ.–ಕೃಷಿ ತಂತ್ರಜ್ಞಾನಗಳ ಅನ್ವಯ ಹಾಗೂ ಸಂಶೋಧನಾ ಸಂಸ್ಥೆ, ವಲಯ–8, ಬೆಂಗಳೂರಿನ ಪಶು ವಿಜ್ಞಾನಿಯಾದ ಡಾ. ಡಿ. ವಿ. ಕೊಳೆಕರ್ ಇವರು ಆಡು ಸಾಕಾಣಿಕೆ ಘಟಕಕ್ಕೆ ಭೇಟಿ ನೀಡಿದರು.



ಧಾರವಾಡ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಡಾ. ವಿ. ಐ. ಬೆಣಗಿ ಇವರು ನೇಪಾಳ ದೇಶದ ವಿಜ್ಞಾನಿಗಳ ನಿಯೋಗದೊಂದಿಗೆ ದಿ. 03.09.2015 ರಂದು ಕೇಂದ್ರದ ವಿವಿಧ ಪ್ರಾತ್ಯಕ್ಷಿಕೆ ಘಟಕಗಳಿಗೆ ಭೇಟಿ ನೀಡಿದರು.



ದಿ.19.09.2015 ರಂದು ಭಾ.ಕೃ.ಸಂ.ಮಂ.– ಕೃ.ತಅ.ಸಂ.ಸಂ., ವಲಯ – 8, ಬೆಂಗಳೂರಿನ ಬೇಸಾಯಶಾಸ್ತ್ರ ಪ್ರಧಾನ ವಿಜ್ಞಾನಿಯಾದ ಡಾ. ಡಿ. ವಿ. ಶ್ರೀನಿವಾಸ ರೆಡ್ಡಿ ಇವರು ಕೇಂದ್ರದ ಕ್ಷೇತ್ರ ಹಾಗೂ ವಿವಿಧ ಪ್ರಾತ್ಯಕ್ಷಿಕೆ ಘಟಕಗಳಿಗೆ ಭೇಟಿ ನೀಡಿ ಚರ್ಚಿಸಿದರು.


| | | |
|---|---|---|
| ಸಂಪಾದಕರು ಹಾಗೂ ಪ್ರಕಾಶಕರು | : | ಡಾ. ಎಸ್. ಎಮ್. ಮಂಟೂರ<br>ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು, ಭಾ.ಕೃ.ಸಂ.ಮಂ.–ಕೃಷಿ ವಿಜ್ಞಾನ ಕೇಂದ್ರ, ಧಾರವಾಡ |
| ಸಹ ಸಂಪಾದಕರು | : | ಡಾ. ಎಸ್. ಎಮ್. ಹಿರೇಮಠ, ಡಾ. ಉಮಾ ಎನ್. ಕುಲಕರ್ಣಿ<br>ಡಾ. ಕೆ. ಪಿ. ಗುಂಡಣ್ಣವರ, ಡಾ. ಶೋಭಾ ಯು. ಇಮ್ಮಡಿ<br>ಶ್ರೀಮತಿ ಶೈಲಜಾ ಎನ್. ಗಲಗಲಿ, ಶ್ರೀ. ಸಿ. ಜೆ. ಕುಮಾರ, ಶ್ರೀ ನಿಂಗಪ್ಪ |
| ಅಕ್ಷರ ಜೋಡಣೆ ಮತ್ತು ವಿನ್ಯಾಸ | : | ಶ್ರೀ ಉಳವಪ್ಪ ಶಿವೋಜಿ<br>ಡಿಟಿಪಿ, ಘಟಕ ಪ್ರಕಟಣಾ ಕೇಂದ್ರ, ಕೃವಿವಿ, ಧಾರವಾಡ |



ಇಂದ,

ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು
ಭಾ.ಕೃ.ಸಂ.ಮಂ.–ಕೃಷಿ ವಿಜ್ಞಾನ ಕೇಂದ್ರ, ಸೈದಾಪುರ ಫಾರ್ಮ
ಧಾರವಾಡ 580 005 (ಕರ್ನಾಟಕ)
ದೂರವಾಣಿ : 0836–2444272
ಮಿಂಚಂಚೆ : pc_kvkd@rediffmail.com
ವೆಬ್‌ಸೈಟ್ : www.kvkdharwad.org
ಮೊಬೈಲ : 94484 95342


ಗೆ,

ತೆರೆದ ಅಂಚೆ

ಉಚಿತ ಕೃಷಿ ಸಂದೇಶಗಳಿಗಾಗಿ ದೂರವಾಣಿ ಸಂಖ್ಯೆ:0836–2444272ಗೆ ಕರೆಮಾಡಿ / www.kvkdharwad.org ವೆಬ್‌ಸೈಟ್‌ನಿಂದ ನೋಂದಣಿ ಮಾಡಿ

